ಕರ್ನಾಟಕ ಸರ್ಕಾರ

ಸಂ. ಕಂಇ 150 ಮುನೋಮು 2006

ಕರ್ನಾಟಕ ಸರ್ಕಾರದ ಸಚಿವಾಲಯ,
5ನೇ ಮಹಡಿ ಬಹು ಅಂತಸ್ತುಗಳ ಕಟ್ಟಡ,
ಬೆಂಗಳೂರು.560 001.
ದಿನಾಂಕ: 4/9/2006.

## ಸುತ್ತೋಲೆ

1908 ರ ನೋಂದಣಿ ಕಾಯ್ದೆಯಡಿಯಲ್ಲಿ ಉಪನೋಂದಣಾಧಿಕಾರಿಗಳಾಗಿ ನೇಮಕಾತಿ ಗೊಂಡ ಅಧಿಕಾರಿಗಳನ್ನು

1. ಹಿಂದು ವಿವಾಹ ಕಾಯ್ದೆ 1955
2. ವಿಶೇಷ ವಿವಾಹ ಕಾಯ್ದೆ 1954
3. ಕರ್ನಾಟಕ ವಿವಾಹ ಕಾಯ್ದೆ (ನೋಂದಣಿ ಮತ್ತು ಇತರೆ ಉಪಬಂಧಗಳು) 1976. ಮತ್ತು
4. ಇತರ ವಿವಾಹ ಕಾಯ್ದೆಗಳಡಿಯಲ್ಲಿ ಇವರನ್ನು ವಿವಾಹ ನೋಂದಣಾಧಿಕಾರಿಗಳೆಂದು ಸಹ ನೇಮಕಾತಿ ಮಾಡಲಾಗಿದೆ.

1908 ರ ನೋಂದಣಿ ಕಾಯ್ದೆ ಹಾಗೂ ಕರ್ನಾಟಕ ಮುದ್ರಾಂಕ ನಿಯಮಗಳು 1965 ರಲ್ಲಿ ಕಾರ್ಯ, ಕರ್ತವ್ಯ, ಜವಾಬ್ದಾರಿಯಿಂದ ನಿರ್ವಹಿಸುವ ಶಾಸನಬದ್ಧ ಕಾರ್ಯವನ್ನು ವಿವರಿಸಿರುವಂತೆ ಮಾನ್ಯ ಸರ್ವೋಚ್ಛ ನ್ಯಾಯಾಲಯ ಮತ್ತು ಉಚ್ಛ ನ್ಯಾಯಾಲಯದ ಆದೇಶ ಗಳಂತೆ ಉಪ ನೋಂದಣಾಧಿಕಾರಿಗಳು ಕರ್ತವ್ಯ ನಿರ್ವಹಿಸತಕ್ಕದ್ದು.

ಉಪ ನೋಂದಣಾಧಿಕಾರಿ ಆಸ್ತಿ ಹಸ್ತಾಂತರದ ಮತ್ತು ಆಸ್ತಿಯೇತರ ದಸ್ತಾವೇಜುಗಳನ್ನು ನೋಂದಣಿ ಮಾಡುವ ಕಾರ್ಯ ನಿರ್ವಹಿಸುವದರ ಜೊತೆಗೆ ವಿವಾಹ ನೋಂದಣಾಧಿಕಾರಿಯೆಂದು ವಿವಾಹ ನೋಂದಣಿ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಒಂದೆ ಸಮಯದಲ್ಲಿ ಅವರು ನೋಂದಣಿ ಕಾಯ್ದೆಯ ಮತ್ತು ವಿವಾಹ ನೋಂದಣಿ ಕಾಯ್ದೆಯ ಕಾರ್ಯಗಳನ್ನು ನಿರ್ವಹಣೆ ಮಾಡಿದರೂ ಸಹ ಪ್ರತಿ ಕಾಯ್ದೆಯಡಿಯಲ್ಲಿ ನಿರ್ವಹಿಸುವ ಅಧಿಕಾರ ಮತ್ತು ಕಾರ್ಯವ್ಯಾಪ್ತಿಗಳು ಸ್ವತಂತ್ರವಾಗಿರುತ್ತವೆ. ಕೆಲವೊಮ್ಮೆ ಒಂದು ಕಾಯ್ದೆಯಡಿಯಲ್ಲಿ ತೆಗೆದುಕೊಂಡ ಶಾಸನ ಬದ್ಧ ಕ್ರಮಗಳು ಇನ್ನೊಂದು ಕಾಯ್ದೆಯಡಿಯಲ್ಲಿಯ ಕ್ರಮಗಳಿಗೆ ವ್ಯತಿರಿಕ್ತವಾಗಿದ್ದು ಒಂದರ ಕ್ರಮಗಳು ಇನ್ನೊಂದರ ಶಾಸನಬದ್ಧವಾಗಿ ತೆಗೆದುಕೊಂಡ ಕ್ರಮಗಳನ್ನು ನಿಷ್ಕ್ರಿಯಗೊಳಿಸಬಹುದಾಗಿರುವಂಥ ಒಕ್ಕಣಿಕೆಗಳನ್ನು ಹೊಂದಿರುತ್ತವೆ. ಒಂದು ಕಾಯ್ದೆಯಡಿಯ ಕ್ರಮಗಳು ಇನ್ನೊಂದು ಕಾಯ್ದೆಯಡಿಯ ಕ್ರಮಗಳನ್ನು ನಿಷ್ಕ್ರಿಯಗೊಳಿಸುವಂಥ ಈ ಸಂದರ್ಭಗಳು ಆಕ್ಷೇಪಣೀಯವಾಗಿದ್ದು ಈ ಕ್ರಮಗಳು ಯಾವುದೇ ವಿಮರ್ಶೆಗೆ ಒಳಪಡಲಾರವು.

ಈಗಾಗಲೇ ಅಸ್ತಿತ್ವದಲ್ಲಿರುವ ವಿವಾಹಗಳನ್ನು ರದ್ದುಗೊಳಿಸುವ ಅಥವಾ ರದ್ದು ಮಾಡುವ ಕರಾರುಗಳ ಒಕ್ಕಣೆ ಇರುವ ವಿವಾಹ ರದ್ದತಿ ಮತ್ತು ವಿವಾಹ ವಿಚ್ಛೇದನದ ಕರಾರು ಪತ್ರಗಳು, ನೋಂದಣಿ ಕಾಯ್ದೆಯಡಿಯಲ್ಲಿ 4ನೇ ಪುಸ್ತಕದ ಸಂಕೀರ್ಣ ಭಾಗದಲ್ಲಿ ನೋಂದಣಿಯಾಗುತ್ತಿರುವುದು ಮತ್ತು ಇದರಿಂದ ಅಸ್ತಿತ್ವದಲ್ಲಿರುವ ವಿವಾಹಗಳು

ರದ್ದತಿಯಾದಂತೆ ಪಕ್ಷಗಾರರು ಭ್ರಮಿಸುವಂಥ ಪರಿಸ್ಥಿತಿಗಳು ನಿರ್ಮಾಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ನೋಂದಣಿ ಕಾಯ್ದೆಯಡಿಯಲ್ಲಿ ವಿವಾಹ ವಿಚ್ಛೇದನ ಪತ್ರ ಅಥವಾ ವಿಚ್ಛೇದನದ ಕರಾರು ಪತ್ರ ನೋಂದಣಿ ಮಾಡುವುದರಿಂದ ಅದರ ಸಾಧಕ ಬಾಧಕಗಳಿಗೆ ನೋಂದಣಿದಾರರು ಬಾಧ್ಯಸ್ಥರೆ ಹೊರತು ವಿವಾಹ ಕಾಯ್ದೆಯಡಿಯಲ್ಲಿ ಇಂತಹ ಕರಾರು ಪತ್ರಗಳು ತಮ್ಮಿಂದ ತಾವೇ ವಿಚ್ಛೇದನ ಅಥವಾ ವಿಚ್ಛೇದನದ ಪೂರ್ವಭಾವಿ ಕ್ರಮಗಳಾಗಿ ರೂಪುಗೊಳ್ಳಲಾರವು. ವಿಚ್ಛೇದನವು ವಿವಾಹ ಕಾಯ್ದೆಯಡಿಯಲ್ಲಿ ಒಂದು ಶಾಸನಬದ್ಧ ಕ್ರಮವಾಗಿರುತ್ತದೆ. ನೋಂದಣಿ ಕಾಯ್ದೆಯಡಿಯಲ್ಲಿಯ ಯಾವುದೇ ನೋಂದಣಿಯ ಕ್ರಮಗಳು ವಿವಾಹ ಕಾಯ್ದೆಯಡಿಯ ಕ್ರಮಗಳಿಗೆ ಪೂರಕ ಅಥವಾ ಪರ್ಯಾಯ ಕ್ರಮವಾಗಲಾರವು. 1908 ರ ನೋಂದಣಿ ಕಾಯ್ದೆಯಡಿಯಲ್ಲಿ ಹೀಗೆ ವಿವಾಹ ರದ್ದತಿ ಕರಾರು ಪತ್ರ ಮತ್ತು ವಿವಾಹ ರದ್ದತಿ ಪತ್ರಗಳನ್ನು ನೋಂದಣಿ ಮಾಡುವುದರಿಂದ ಕೆಲವೊಮ್ಮೆ ವಿವಾಹ ಕಾಯ್ದೆಯಡಿಯಲ್ಲಿಯ ಕ್ರಮಗಳನ್ನು ನಿರ್ವಹಣೆ ಮಾಡುವಲ್ಲಿ ತೊಡಕುಂಟಾಗುವ ಪ್ರಸಂಗಗಳು ಉಂಟಾಗುವ ಸಂಭವವಿರುತ್ತದೆ.

ಈ ಕಾರಣದಿಂದ ವಿವಾಹ ಕಾಯ್ದೆಗಳ ಕಲಂಗಳ ಪ್ರಕಾರ ನ್ಯಾಯಾಲಯದ ನಿರ್ದೇಶನಗಳಿಗೆ ಪೂರಕವಾಗಿಲ್ಲದ ವಿವಾಹ ರದ್ದತಿಯ ಕರಾರು ಪತ್ರ ಮತ್ತು ವಿವಾಹ ವಿಚ್ಛೇದನದಂಥಹ ಪತ್ರಗಳನ್ನು 1908ರ ನೋಂದಣಿ ಕಾಯ್ದೆಯಡಿಯಲ್ಲಿಯ ನೋಂದಣಾಧಿಕಾರಿಗಳು ನೋಂದಣಿ ಮಾಡದಂತೆ ಈ ಮೂಲಕ ನಿರ್ಭಂಧನೆ ವಿಧಿಸಲಾಗಿದೆ.

ಸುತ್ತೋಲೆಯನ್ನು ಸ್ವೀಕರಿಸಿ ಇದರಲ್ಲಿಯ ನಿರ್ದೇಶನಗಳನ್ನು ಚಾಚು ತಪ್ಪದಂತೆ ಪಾಲಿಸುವಂತೆ ಈ ಮೂಲಕ ಕಟ್ಟು ನಿಟ್ಟಿನ ಆದೇಶ ನೀಡಲಾಗಿದೆ.

(ಅರವಿಂದ್ ಜಿ. ರಿಸ್‌ಬುಡ್)
ಸರ್ಕಾರದ ಕಾರ್ಯದರ್ಶಿ,
ಕಂದಾಯ ಇಲಾಖೆ.

**ಪ್ರತಿ:**

1. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು
2. ರಾಜ್ಯದ ಎಲ್ಲ ಜಿಲ್ಲಾ ನೋಂದಣಾಧಿಕಾರಿಗಳಿಗೆ
3. ರಾಜ್ಯದ ಎಲ್ಲ ಉಪ ನೋಂದಣಾಧಿಕಾರಿಗಳಿಗೆ
4. ರಕ್ಷಾ ಕಡತ.
5. ಹೆಚ್ಚುವರಿ ಪ್ರತಿ.

ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ
ಸಂಖ್ಯೆ 1702, "ಅಥೇನಿ ಕಾಂಪ್ಲೆಕ್ಸ್",
(ಹೊಸ. ಪಿ ಸಿ. ಪೆಟ್ರೋಲ್ ಬಂಕ್ ಪಕ್ಕ)
ನಂ|| ರಾಜ್ ಕುಮಾರ್ ರಸ್ತೆ, ಪ್ರಕಾಶನಗರ
ಬೆಂಗಳೂರು – 560 021
ದಿನಾಂಕ: 22-09-06

ಕರ್ನಾಟಕ ಸರ್ಕಾರ
ನೋಂದಣಿ ಮತ್ತು ಮುದ್ರಾಂಕ ಇಲಾಖೆ
ಸಂಖ್ಯೆ: ಜಿನೋಅ-13/2004-05

ಜ್ಞಾಪನ

ಜಿಲ್ಲಾ ನೋಂದಣಾಧಿಕಾರಿಗಳು
ಬೆಂಗಳೂರು ಗ್ರಾಮಾಂತರ ಜಿಲ್ಲೆ